ಸಾಧ್ಯವಾಗಿಲ್ಲ. ಆದರೂ 25 ಜನರೇಟರ್ ಸೆಟ್‌ಗಳನ್ನು ಸರಬರಾಜು ಮಾಡಿ 25 ಬಾವಿಗಳನ್ನು ವಿದ್ಯುದ್ಧೀಕರಿಸಲಾಗಿದೆ. ಇದರಿಂದ ಸುಮಾರು 50 ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಕೊಡಲಾಗಿದೆ.

ವಿಷಯ:- ಬಿಜಾಪುರ ನಗರದಲ್ಲಿರುಪ ಪ್ರಮುಖ ರಸ್ತೆ ಮತ್ತು ವೃತ್ತಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 172 (47)

ಶ್ರೀ ಬಸವನಗೌಡ ರಾ.ಪಾಟೀಲ್ (ವಿಜಾಪುರ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಿಜಾಪುರ ನಗರದಲ್ಲಿ ಈಗಿರುವ ಪ್ರಮುಖ ರಸ್ತೆ ಹಾಗೂ ವೃತ್ತಗಳೆಷ್ಟು ಮತ್ತು ಅವುಗಳಿಗೆ ಈಗಿರುವ ಹೆಸರುಗಳೇನು?

2) ವಿಜಾಪುರ ನಗರದ ಪ್ರಮುಖ ಹೊಸ ಬೀದಿ ಹಾಗೂ ವೃತ್ತಗಲಿಗೆ ನಾಮಕರಣ ಮಾಡಲು ಯೋಜಿಸಲಾಗಿದೆಯೇ? ಹಾಗಿದ್ದರೆ ಪ್ರಸ್ತಾವನೆಗೆ ಬಂದ ಹೆಸರುಗಳಾವುವು?

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

1) ವಿಜಾಪುರ ನಗರದಲ್ಲಿ ಈಗಿರುವ

ರಸ್ತೆಗಳು	18
ವೃತ್ತಗಳು	10

ಅವುಗಳ ವಿವರ ಈ ಕೆಳಗಿನಂತಿದೆ:

ರಸ್ತೆಗಳು:

1) ಮಹಾತ್ಮಾಗಾಂಧಿ ರಸ್ತೆ 2) ಸಿದ್ದೇಶ್ವರ ರಸ್ತೆ 3) ಶೋಲಾಪುರ ರಸ್ತೆ. 4) ಆಝಾದ್ ರಸ್ತೆ. 5) ಮಹಾವೀರ ರಸ್ತೆ. 6) ರಾಮಮಂದಿರ ರೋಡ್. 7) ಇಂಡಿ ರಸ್ತೆ. 8) ಬಾಗಲಕೋಟೆ ರಸ್ತೆ. 9) ಕಛೇರಿ ರಸ್ತೆ, 10) ಆರ್ಕಿಲ್ಲಾ ರಸ್ತೆ, 11) ಬಸವನ ಬಾಗೇವಾಡಿ ರಸ್ತೆ, 12) ಜುಮ್ಮಾ ಮಸೀದಿ ರಸ್ತೆ, 13) ಪಾಶ್ಚಾಪೂರ ರಸ್ತೆ, 14) ಅಥಣಿ ರಸ್ತೆ, 15) ಶಿಖಾರ್ ಖಾನ್ ರಸ್ತೆ, 16) ಬಬಲೇಶ್ವರ ರಸ್ತೆ, 17) ಬಡಿಕಮಾನ್ ರೋಡ್, 18 ಸ್ಟೇಷನ್ ಬ್ಯಾಕ್ ರೋಡ್.

ವೃತ್ತಗಳು:-

1) ಮಹಾತ್ಮಾಗಾಂಧಿ ವೃತ್ತ 2) ಬಸವೇಶ್ವರ ವೃತ್ತ, 3) ಡಾ:ಅಂಬೇಡ್ಕರ್ ವೃತ್ತ, 4) ಟಿಪ್ಪುಸುಲ್ತಾನ್ ವೃತ್ತ, 5) ಗಣಪತಿ ವೃತ್ತ (ಇಂಡಿ ವೃತ್ತ), 6) ನಾಲಬಂದ ಚೌಕ, 7) ಶಿವಾಜಿವೃತ್ತ, 8) ಗಣಪತಿ ವೃತ್ತ (ಅಡಕಿ ಗಲ್ಲಿ), 9) ಹುತಾತ್ಮರ ವೃತ್ತ, 10) ಹಖೀಮ ವೃತ್ತ.

2) ಹೌದು. ಅವುಗಳೆಂದರೆ

ಮಾರ್ಗಗಳು:

1) ರಾಜೀವಗಾಂಧಿ ರಸ್ತೆ

2) ಶ್ರೀ ಬಸವೇಶ್ವರ ರಸ್ತೆ

3) ರಾಣಾ ಪ್ರತಾಪಸಿಂಗ್ ರಸ್ತೆ

4) ಪಥೆ ಔರಂಗಜೇಬ ರಸ್ತೆ

5) ಬಾಬು ಜಗಜೀವನರಾಮ್ ರಸ್ತೆ

ವಿಷಯ:- ಕೈಮಗ್ಗ ಅಭಿವೃದ್ಧಿ ನಿಗಮದ ವಿಷಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 173 (46)

ಶ್ರೀ ಬಸವನಗೌಡ ರಾ.ಪಾಟೀಲ್ (ವಿಜಾಪುರ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಕುರಿತು ಒತ್ತಾಯಿಸಿ ಕೈಮಗ್ಗ ಅಭಿವೃದ್ಧಿ ನಿಗಮದ ನೌಕರರು ನಡೆಸುತ್ತಿರುವ ಹೋರಾಟ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕುರಿತು ಸರ್ಕಾರದವರ ನಿಲುವೇನು?

ಇ) ಈ ಹೋರಾಟದಲ್ಲಿ ಭಾಗವಹಿಸಿದ್ದ ನೌಕರರ ಬಗ್ಗೆ ಸಾಮೂಹಿಕ ವರ್ಗಾವಣೆಯಂಥ ಕಿರುಕುಳ ನೀಡುತ್ತಿರುವುದು ನಿಜವೇ?

ಈ) ಕಛೇರಿ ಸ್ಥಳಾಂತರ ವಿಷಯ ನೆನೆಗುದಿಗೆ ಬೀಳಲು ಕಾರಣವೇನು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) ಇಲ್ಲ.

ಆ) ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ತತ್ವಶಃ ಒಪ್ಪಿದೆ.

ಇ) ಇಲ್ಲ.

ಈ) ಸ್ಥಳಾಂತರದ ರೂಪುರೇಷೆಗಳನ್ನು ನಿರ್ಧರಿಸುವ ವಿಷಯ ಪರಿಶೀಲಿಸಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿ ಕಬ್ಬಿನ ದರ ಕುರಿತು.